**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಸೇಡಂ**

**CC No.354-2024**

**(ಇಂದು ದಿಃ 27-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

| ಹೆಸರು ಶ್ರೀ/ಶ್ರೀಮತಿ | ಶಂಕರ | CW-8 | PW-2 |
|---|---|---|---|
| ತಂದೆ/ಗಂಡನ ಹೆಸರು | ರೇವಣಪ್ಪ | | |
| ವಯಸ್ಸು | 66 ವರ್ಷ | | |
| ಉದ್ಯೋಗ | ನಿವೃತ ASI | | |
| ವಾಸ ಸ್ಥಳ | ಕಲಬುರಗಿ | | |

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭೀಯೋಜಕರಿಂದಃ-**

ನಾನು 2014 ರಿಂದ 2019 ರವರೆಗೆ ಮುದೋಳ ಪೊ.ಠಾಣೆಯಲ್ಲಿ ಹೆಚ್ ಸಿ ಆಗಿ ಕಾರ್ಯನಿರ್ವಹಿಸಿದ್ದೆ. ದಿನಾಂಕ 01.03.2014 ರಂದು ಚಾಸಾ-1 ರವರು ನೀಡಿದ ದೂರನ್ನು ಪಡೆದುಕೊಂಡು ಪ್ರಕರಣ ದಾಖಲು ಮಾಡಿರುತ್ತೇನೆ. ದೂರನ್ನು ಈಗಾಗಲೇ ನಿಪಿ-1 ಎಂಂದು ಗುರುತಿಸಿಲಾಗಿದೆ . ನಿಪಿ-1 ಪ್ರಕಾರ ಪ್ರಕರಣ ದಾಖಲು ಮಾಡಿರುತ್ತೇನೆ. FIR ಅನುನ ನಿಪಿ-2 ಎಂದು ಗುರುತಿಸಲಾಯಿತು. ಅದೇ ದಿನ ಬೆಳಿಗ್ಗೆ 12.00 ರಿಂದ 12.30 ರವರೆಗೆ ಚಾಸಾ-2 ಮತ್ತು 3 ರ ಸಮಕ್ಷಮ ಪಂಚಾನಮೆ ಕ್ರಮ ಜರುಗಿಸಿ ಒಂದು ಕಟ್ಟಿಗೆಯನ್ನು ವಶಪಡಿಸಿಕೊಂಡಿರುತತೇನೆ. ಪಂಚನಾಮೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿಪಿ-3 ್ (ಎ) ಎಂದು ಗುರುತಿಸಲಾಯಿತು. ನಾನು ವಶಪಡಿಸಿಕೊಂಡ ಕಟ್ಟಿಗೆ ನ್ಯಾಯಾಲಯದ ಮುಂದೆ ಇದ್ದು ಅದನ್ನು ಈಗಾಗಲೆ ಮು. ಮಾ. 1 ಎಂದು ಗುರುತಿಸಲಾಗಿದೆ. ಅದೇ ದಿನ ಚಾಸಾ-4 ರಿಂದ 6 ರವರ ಹೇಳಿಕೆ ಪಡೆದುಕೊಂಡಿರುತ್ತೆನೆ. ದಿನಾಂಕ 30.03.2014 ರಂದು ಚಾಸಾ-7 ರವರಿಂದ ಚಸಾ-1 ರವರ ಗಾಯದ ಪ್ರಮಾಣ ಪತ್ರ ಪಡೆದುಕೊಂಡಿರುತ್ತೇನೆ. ಗಾಯದ ಪ್ರಮಾಣ ಪತ್ರವನ್ನು ನಿಪಿ-4 ಎಂದು ಗುರುತಿಸಲಾಯಿತು. ನಂತರ ಕಡತ ಪರಿಶೀಲನೆ ಮಾಡಿ ದಿನಾಂಕ 31.03.2014 ರಂದು ತನಿಖೆ ಪೂರೈಸಿ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರ ಸಲ್ಲಿಸಿದ್ದೇನೆ.

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲ.**

**<u>ಪಾಟೀ ಸವಾಲುಃ- ಶ್ರೀHSR ವಕೀಲರಿಂದಃ</u>**

ಚಸಾ-1 ರಮೇಶ ಶೀಲಾರಕೋಟ್ ವಕೀಲರ ಅಣ್ಣನ ಮಗ ಎಂದರೆ ಸರಿ. ಸದರಿ ವಕೀಲರ ಮಾತು ಕೇಳಿಕೊಂಡು ನಾನು ದೂರು ಪಡೆದುಕೊಂಡು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಹಲ್ಲ, ಆರೋಪಿಗಳು ಮತ್ತು ಚಸಾ-1 ರ ನಡುವೆ ಯಾವುದೇ ಜಗಳ ಆಗದೇ ಇದ್ದರು ವಕೀಲರ ಮಾತು ಕೇಳಿ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಮತ್ತು ಚಸ-1 ರ ನಡುವೆ ಭೂ ವಿವವಾದ ಇತ್ತು ಎಂದರೆ ಸರಿ. ಘಟನಾ ಸ್ಥಳದ ಅಕ್ಕಪಕ್ಕ ವಾಸದ ಮನೆಗಳು ಇವೆ ಎಂದರೆ ಸರಿ. ಚಾಸಾ-5 ಮತ್ತು 6 ರ ಮನೆಗಳು ಘಟನಾ ಸ್ಥಳದ ಅಕ್ಕಪಕ್ಕ ಇಲ್ಲ ಎಂದರೆ ಸರಿ. ಚಸ-5 ಮತ್ತು 6 ಚಸಾ-1 ಮತ್ತು ರಮೇಶ ವಕೀಲರಿಗೆ ಸಂಬಂದಿಗಳು ಎಂದರೆ ನನಗೆ ಗೊತ್ತಿಲ್ಲ. ಘಟನಾ ಸ್ಥಳದ ಅಕ್ಕಪಕ್ಕದ ೀನಿವಾಸಿಗಳ ಹೇಳಿಕೆ ಪಡೆದಿಲ್ಲ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ಕಟ್ಟಿಗೆ ಎಲ್ಲಾ ಕಡೆ ಇರುತ್ತವೆ ಎಂದರೆ ಸರಿ. ಘಟನಾ ಸ್ಥಳದಲ್ಲಿ ಯಾವುದೇ ಕಟ್ಟಿಗೆ ಇಲ್ಲದೇ ಇದ್ದರು ಚಸ—1 ತಂದುಕೊಟ್ಟ ಕಟ್ಟಿಗೆಯನ್ನು ವಶಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಗಾಯದಂ ಪ್ರಮಾಣ ಪತ್ರದಲ್ಲಿ ಅದನುಜನ ವೈದ್ಯರು ನೀಡಿದ ಮತ್ತು ನಾನು ಅದನುನ ಪಡೆದುಕೊಂಡ ದಿನಾಂಕ ನಮೂದಾಗಿಲ್ಲ ಎಂದರೆ ಸರಿ. ನಾನು ಮತ್ತು ವೈದ್ಯರು ಸೇರಿ ಸುಳ್ಳು ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ದೋಷಾರೋಪಣ ಪತ್ರದಲಿಲ ಹೇಳಿರುವಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಿಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ, ಸೇಡಂ.**